ಬೆಂಗಳೂರು–ಮೈಸೂರು ನಡುವೆ ವಾಹನ ಸಂಚಾರದ ಬಗ್ಗೆ

398. ಶ್ರೀ ಹರ್ಷಕುಮಾರಗೌಡ ಕೆ. (ಚಾಮರಾಜ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರಿನ ನಡುವೆ ವಾಹನ ಸಂಚಾರದ ಒತ್ತಡದಿಂದಾಗುತ್ತಿರುವ ಅಪಘಾತಗಳ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದನ್ನು ಪರಿಹರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಇ) ಕನಕಪುರ ಮಾರ್ಗವಾಗಿ ಬೆಂಗಳೂರು–ಮೈಸೂರು ರಸ್ತೆಯನ್ನು ಅಭಿವೃದ್ಧಿಪಡಿಸಲು ಯೋಚಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಯಾವಾಗ ಅನುಷ್ಠಾನಕ್ಕೆ ತರಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಬಂದಿದೆ.

ಆ) ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ತೀವ್ರವಾಗಿರುವುದರಿಂದ ಈ ರಸ್ತೆಯಲ್ಲಿ ಬರುವ ಅಪಾಯಕಾರಿಯಾದ ತಿರುವುಗಳನ್ನು ನೇರ ಮಾಡುವುದು, ಸೇತುವೆಗಳನ್ನು ಅಗಲಪಡಿಸುವುದು, ದುರ್ಬಲ ಸೇತುವೆಗಳ ಪುನರ್ ನಿರ್ಮಾಣ, ತೀವ್ರ ಸಂಚಾರ ದಟ್ಟಣೆ ಹಾಗೂ ನಗರ ಪ್ರದೇಶಗಳಲ್ಲಿ ಬರುವ ರಸ್ತೆ ಭಾಗಗಳನ್ನು ಅಗಲಪಡಿಸುವುದು ಮುಂತಾದ ಕ್ರಮ ತೆಗೆದುಕೊಳ್ಳಲಾಗಿದೆ. 1990–91ನೇ ಸಾಲಿನಲ್ಲಿ ಮೇಲಿನ ಅಭಿವೃದ್ಧಿ ಕಾಮಗಾರಿಗಳಿಗಾಗಿ 50 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿದೆ. ಈ ರಸ್ತೆಯನ್ನು ಸೂಕ್ತವಾಗಿ ನಿರ್ವಹಣೆಯನ್ನು ಮಾಡಿ ಸುಸ್ಥಿತಿಯಲ್ಲಿಡಲಾಗಿದೆ.

ಇ) ಬೆಂಗಳೂರು–ಮೈಸೂರು ರಸ್ತೆ (ಕನಕಪುರ ಮಾರ್ಗ) :– ಹುಣಸೂರು – ವೀರಾಜಪೇಟೆ ಮೂಲಕ ಕೇರಳ ರಾಜ್ಯದ ತಲ್ಲಿಚೇರಿಗೆ ಇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಈ) ಈ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವನ್ನು ಕಾಯಲಾಗಿದೆ.

ಸರಕಾರದ ಹೊಸ ಗಣಿ ನೀತಿಯ ಬಗ್ಗೆ

402. ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):– ಮಾನ್ಯಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಗಣಿ ನೀತಿಯಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು?

ಆ) ಈವರೆಗೆ ಎಷ್ಟು ಜನ ಉದ್ದಿಮೆಗಳಿಗೆ ಹೊಸನೀತಿಯ ಪ್ರಕಾರ ಗುತ್ತಿಗೆ (ಲೈಸನ್ಸ್) ನೀಡಲಾಗಿದೆ?

ಇ) ಗುತ್ತಿಗೆ ಪಡೆದಿರುವ ಲೈಸೆನ್ಸ್‌ದಾರರು ಸಂಸ್ಥೆಗಳು ಮತ್ತು ಅವರ ಹೆಸರುಗಳೇನು?

ಶ್ರೀ ಎಂ. ಎಲ್. ಉಸ್ತಾದ್, (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು):–

ಅ) ಇಲ್ಲಿಯವರೆಗೆ ಸರ್ಕಾರಕ್ಕೆ ಆದಾಯ ಬಂದಿರುವುದಿಲ್ಲ.

ಆ) ಯಾರಿಗೂ ಗುತ್ತಿಗೆ ನೀಡಲಾಗಿಲ್ಲ.

ಇ) ಉದ್ಭವಿಸುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಶಿಕ್ಷಕರ ಕೊರತೆಯ ಬಗ್ಗೆ

430. ಶ್ರೀ ಡಿ. ಹಲಗೇಗೌಡ, (ಪಾಂಡವಪುರ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಪ್ರೌಢಶಾಲಾ ಶಿಕ್ಷಕರ ಕೊರತೆ ಇರುವುದು ನಿಜವೇ?